# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-10-2022

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 143/2022 ಕಲಂ 279, 304(ಎ) ಐಪಿಸಿ :-

ದಿನಾಂಕ: 01/10/2022 ರಂದು 1000 ಗಂಟೆಗೆ ಫಿರ್ಯಾದಿ ಶ್ರೀ ಮಹ್ಮದ ಇಸ್ಮಾಯಿಲ್ ತಂದೆ ನೂರೋದ್ದಿನ ಸಾಹೆಬ ವಯ 42 ವರ್ಷ ಉ॥ ಕೂಲಿ ಕೆಲಸ ಸಾ॥ ಚಿಟ್ಟಾ ವಾಡಿ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೆನೆಂದರೆ, ಇವರ ತಮ್ಮನಾದ ಮಹ್ಮದ ಗಫಾರ ಇತನು ಹೋಟೆಲ್ ಕೆಲಸ ಮಾಡಿಕೊಂಡು ಚಿಟ್ಟಾ ವಾಡಿಯಲ್ಲಿಯೆ ವಾಸವಾಗಿದ್ದು ದಿನಾಂಕ 27/09/2022 ರಂದು ತನ್ನ ಖಾಸಗಿ ಕೆಲಸ ಕುರಿತು ಮೋಟಾರ ಸೈಕಲ ನಂ ಕೆ.ಎ.-38 ಹೆಚ್-2099 ನೇದ್ದರ ಮೇಲೆ ಬೀದರಕ್ಕೆ ಬಂದು ಕೆಲಸ ಮುಗಿಸಿಕೊಂಡು ಮರಳಿ ಚಿಟ್ಟಾವಾಡಿಗೆ ಹೋಗುವಾಗ ಮಧ್ಯಾಹ್ನ ಅಂದಾಜು 3-30 ಗಂಟೆಗೆ ಬೀದರ ಚಿಟ್ಟಾ ರೋಡಿನ ತೋರಣ ಕಾಲೋನಿಯ ಹತ್ತಿರ ಇವರ ತಮ್ಮ ಬೈಕನ್ನು ಅತಿವೇಗ ಹಾಗು ನಿಸ್ಕಾಳಜೀತನದಿಂದ ನಡೆಸಿಕೊಂಡು ಬಂದು ಬಿದ್ದಿರುತ್ತಾನೆ. ಇದ್ದರಿಂದ ಗಾಯವಾಗಿದ್ದರಿಂದ ಚಿಕಿತ್ಸೆ ಕುರಿತು ವಾಸು ಆಸ್ಪತ್ರೆಯಲ್ಲಿ ದಾಖಲಿಸಿದ್ದು ದಿನಾಂಕ 01/10/2022 ರಂದು ಬೆಳ್ಳಿಗೆ ಅಂದಾಜು 3 ಗಂಟೆಯ ಸೂಮಾರಿಗೆ ಪಘಾತದಲ್ಲಿ ಆದ ಗಾಯಗಳಿಂದ ಗುಣಮುಖವಾಗದೆ ಚಿಕಿತ್ಸೆ ಕಾಲಕ್ಕೆ ಮೃತಪಟ್ಟಿರುತ್ತಾರೆ ಅಂತ ತಿಳಿಸಿರುತ್ತಾನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಮನ್ನಾಏಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 103/2022 ಕಲಂ 279, 304(ಎ) ಐಪಿಸಿ ಜೊತೆ 187 ಐಎಂವಿ ಎಕ್ಟ :-

ದಿನಾಂಕ:01-10-2022 ರಂದು 22:45 ಗಂಟೆಗೆ ಫಿರ್ಯಾದಿದಾರರಾದ ಶ್ರೀಮತಿ ಶೋಭಾ ಗಂಡ ಸಂಜು ವಡ್ಡರ ವಯ:24 ವರ್ಷ ಜಾ:ವಡ್ಡರ ಉ:ಕೂಲಿಕೆಲಸ ಸಾ:ಮಂಗಲಗಿ ವಾಡಿ ತಾ:ಚಿಟಗುಪ್ಪಾ ಜಿ:ಬೀದರ ರವರು ಠಾಣೆಗೆ ಬಂದು ಹಾಜರಾಗಿ ನೀಡಿದರ ಲಿಖಿತ ದೂರಿನ ಸಾರಾಂಶವೆನೆಂದರೆ ಸಾರಾಂಶವೆನೇಂದರೆ ಇವರ ಪತಿಯು ಪ್ರತಿದಿನದಂತೆ ಕೂಲಿ ಕೆಲಸಕ್ಕೆ ಮಂಗಲಗಿ ಕಡೆಗೆ ಹೋಗುತ್ತಿದೇನೆ. ಅಂತ ಮುಂಜಾನೆ ಮನೆಯಲ್ಲಿ ಹೇಳಿ ಹೋಗಿರುತ್ತಾರೆ. ದಿನಾಂಕ:01-10-2022 ರಂದು ರಾತ್ರಿ 9:00 ಗಂಟೆಯ ಸುಮಾರಿಗೆ ರಂಜೋಳ ಖೇಣಿ ಕ್ರಾಸ್ ಹತ್ತಿರ ಮನ್ನಾಏಖೇಳ್ಳಿ ಕಡೆಯಿಂದ ಹುಮನಾಬಾದ ಕಡೆಗೆ ಹೋಗುವ ರಸ್ತೆಯ ಮುಖಾಂತರ ಸಂಜು ಇತನು ನಡೆದುಕೊಂಡು ಮಂಗಲಗಿ ಗ್ರಾಮದ ಕಡೆಗೆ ಹೋಗುತ್ತಿರುವಾಗ ಮನ್ನಾಏಖೇಳ್ಳಿ ಕಡೆಯಿಂದ ಬರುತ್ತಿದ್ದ ಒಂದು ಕಾರ ನಂ. ಖಿಖ-07 ಉಫಾ-2200 ನೇದ್ದರ ಚಾಲಕನು ತನ್ನ ವಾಹನವನ್ನು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ವಾಹನ ಕಂಟ್ರೋಲ್ ಮಾಡದೇ ನಡೆದುಕೊಂಡು ಹೋಗುತ್ತಿದ್ದ ಸಂಜು ಇತನಿಗೆ ಹಿಂದೆಯಿಂದ ಡಿಕ್ಕಿ ಮಾಡಿ ವಾಹನ ನಿಲ್ಲಿಸದೇ ವಾಹನ ಸಮೇತ ಒಡಿ ಹೋಗಿರುತ್ತಾನೆ. ಅಪಘಾತದಿಂದ ಭಾರಿಗಾಯಗೊಂಡ ಸಂಜು ಇತನು ಸ್ಥಳದಲ್ಲಿಯೆ ಮೃತಪಟ್ಟಿರುತ್ತಾನೆ. ಡಿಕ್ಕಿ ಮಾಡಿ ಕಾರ ಸಮೇತ ಒಡಿ ಹೋಗಿರುವ ಕಾರ ಚಾಲಕನ ವಿರುದ್ದ ಕಾನೂನು ಕ್ರಮ ಜರುಗಿಸಲು ವಿನಂತಿ. ಅಂತ ಕೊಟ್ಟ ಹೇಳಿಕೆಯ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.